# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಗಟಗೆರೆ.ನಿಟ್ಟೂರುಕ್ಲಸ್ಟರ್.




ರಂಗಸ್ವಾಮಿ ಬಿ.ಕೆ

ಮುಖ್ಯ ಶಿಕ್ಷಕರು

ಸ.ಹಿ.ಪ್ರಾ.ಶಾಲೆ, ಸಿಂಗಟಗೆರೆ.

ನಿಟ್ಟೂರುಕ್ಲಸ್ಟರ್, ಹಾಸನ ತಾ||ಜಿಲ್ಲೆ

ಮೊಬೈಲ್ ಸಂ:9980461912


bkrangaswamyteacher@gmail.com

# ನಮ್ಮ ಶಾಲೆಯ ಬಗೆಗಿನ ಕಿರುಪರಿಚಯ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಗಟಗೆರೆ ಶಾಲೆಯು ನಿಟ್ಟೂರುಕ್ಲಸ್ಟರ್ ಸಾಲಗಾಮೆ ಹೋಬಳಿಯ ಹಾಸನ ತಾಲ್ಲೂಕಿಗೆ ಸೇರಿದ್ದು ನಗರ ಪ್ರದೇಶದಿಂದ ಸುಮಾರು 20 ಕಿ.ಮೀ ದೂರವಿದೆ. ಸರ್ವಕಾಲಕ್ಕೂ ಬರಬಹುದಾದರಸ್ತೆ ಮಾರ್ಗ ಹೊಂದಿದ್ದು ಸುಮಾರು 120 ಮನೆಗಳಿದ್ದು ಸರಿಸುಮಾರು 600 ಜನಸಂಖ್ಯೆಯನ್ನು ಹೊಂದಿದೆ.ಈ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ಪ್ರಸ್ತುತ 4 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದುಹಾಗೂ 24 ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದಾರೆ.




**ಉಪಗ್ರಹ ಕಣ್ಣಿನಲ್ಲಿ ಸಿಂಗಟಗೆರೆ ಗ್ರಾಮ**



This document is for viewing ONLY and not for legal purpose

**ಸಿಂಗಟಗೆರೆ ಗ್ರಾಮದ ನಕ್ಷೆ**

# 2.ನಮ್ಮ ಶಾಲೆಯಆವರಣ ಮತ್ತು ಕಟ್ಟಡಗಳು





ನಮ್ಮ ಶಾಲೆಯು ಸರಿಸುಮಾರು ೧ ಎಕರೆಜಾಗದಲ್ಲಿದ್ದುಉತ್ತಮವಾದ ಪಕ್ಕಾ ಕಟ್ಟಡಗಳ ತರಗತಿಕೋಣೆಗಳು ,ಅಡುಗೆಕೋಣೆ, ಶೌಚಾಲಯ, ಕುಡಿಯುವ ನೀರಿನಟ್ಯಾಂಕ್, ಅಂಗನವಾಡಿಕೇಂದ್ರ ಮತ್ತು ಮಕ್ಕಳಿಗೆ ಕ್ರೀಡೆಗೆಅಗತ್ಯಆಟದ ಮೈದಾನ ಲಭ್ಯವಿದ್ದುಆವರಣದಲ್ಲಿತೇಗ,ಸಿಲ್ವರ್, ತೆಂಗಿನ ಮರಗಳು ಹಾಗೂ

ಅಲಂಕಾರಿಕಾ ಸಸ್ಯಗಳು ಮತ್ತು ಬಿಸಿಯೂಟಕ್ಕೆ ಬೇಕಾದ ನುಗ್ಗೆಗಿಡಗಳನ್ನು ನೆಡಲಾಗಿದೆ ಮತ್ತು ಶಾಲಾ ಭದ್ರತೆಗೆ ಸುತ್ತಲೂ ಸುರಕ್ಷಾಗೋಡೆ (ಕಾಪೌಂಡ್) ಇದೆ.

## ೩. ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಸಂಬಂಧಿಸಿದಂತೆ ಕೈಗೊಂಡ ಕಾರ್ಯಗಳು

2022–23 ನೇ ಸಾಲಿನಲ್ಲಿ ದಾನಿಗಳಿಂದ ಸರಿ ಸುಮಾರು 80,000 ಕ್ಕೂ ಹೆಚ್ಚಿನ ಮೌಲ್ಯದ ಶಾಲಾ ಅಗತ್ಯಗಳಾದ ಆಧುನಿಕ ಕಲಿಕೋಪಕರಣಗಳು , ಪೀಠೋಪಕರಣಗಳು, ಸಮವಸ್ತ್ರಗಳನ್ನು ಪಡೆದು ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕರು ಶ್ರಮಿಸುತ್ತಿದ್ದಾರೆ.




ನಮ್ಮೂರಿನಯುವಕರು ಹಳೇ ವಿದ್ಯಾರ್ಥಿಯುಆದ ಶ್ರೀಯುತ ಕುಬೇರ್, ಪೋಲೀಸ್ ಸಬ್‌ಇನ್ಸ್ ಪೆಕ್ಟರ್, ಬೆಂಗಳೂರು.ಇವರು 20,000=00 ರೂ ಮೌಲ್ಯದಗಣಕಯಂತ್ರವನ್ನು ಶಾಲಾ ಮಕ್ಕಲಿಗೆ ಅಗತ್ಯ ಕಲಿಕೆಗೆ ನೀಡಿದ್ದಾರೆ.



ನಮ್ಮಊರಿನಯುವಕರು ಹಾಗೂ ಶಾಲಾ ಶಿಕ್ಷಕರಾದ ರಂಗಸ್ವಾಮಿ, ವೆಂಕಟಸುಬ್ಬಯ್ಯ ,ಜಯರಾಮೇಗೌಡ ಹಾಗೂ ಹರೀಶ್‌ಕುಮಾರ್‌ರವರು ಸೇರಿ 25000 ಮೌಲ್ಯದ ಪ್ರೊಜೆಕ್ಟರ್‌ಅನ್ನು ಶಾಲೆಗೆ ಮಕ್ಕಳ ಕಲಿಕೆಗೆ ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ.




ನಮ್ಮ ಶಾಲೆಯ ಶಿಕ್ಷಕರಾದ ಹರೀಶ್‌ಕುಮಾರ್‌ರವರ ಸಹೋದರರು ಹಾಗೂ ಚಿಕ್ಕಮಗಳೂರು ನಗರಸಭೆಯಕಂದಾಯ ನಿರೀಕ್ಷಕರುಆದ ಶ್ರೀಯುತ ಶಿವಾನಂದ್ ಅವರು ಸ್ಮಾರ್ಟ್‌ಕ್ಲಾಸ್ ಗೆ 4000 ರೂ ಮೌಲ್ಯದಆಗತ್ಯಧ್ವನಿ ವರ್ಧಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ.




ಗ್ರಾಮ ಪಂಚಾಯಿತಿ ನಿಟ್ಟೂರುಅವರ ವತಿಯಿಂದ 16000 ರೂ ಮೌಲ್ಯದ ಪ್ರಿಂಟರ್, ಸ್ಕ್ಯಾನರ್ ಹಾಗೂ ಜೆರಾಕ್ಸ್‌ಯಂತ್ರವನ್ನುಕೊಡುಗೆಯಗಿ ನೀಡಿರುತ್ತಾರೆ.




ನಮ್ಮ ಶಾಲೆಯ ಎಸ್.ಡಿ.ಎಂ.ಸಿ ಸದಸ್ಯರಾದ ಶ್ರೀಯುತ ರವಿಕುಮಾರ್ ಮತ್ತು ಫಾಲಾಕ್ಷಾರವರು 3000 ಮೌಲ್ಯದ ಕಂಪ್ಯೂಟರ್ ಟೇಬಲ್‌ಅನ್ನು ಕೊಡುಗೆಯಾಗಿ ನೀಡಿರುತ್ತಾರೆ.




ನಮ್ಮ ಶಾಲೆಯ ಪೋಷಕ ಪ್ರತಿನಿಧಿಯಾದ ಶ್ರೀಯುತ ಧರ್ಮರವರು 7500=00 ಮೌಲ್ಯದ ಸಮವಸ್ತ್ರವನ್ನುಕೊಡುಗೆಯಾಗಿ ನೀಡಿದ್ದಾರೆ.



ನಮ್ಮ ಶಾಲೆಗೆ ಸುಜಲಾನ್ ಫೌಂಡೇಶನ್, ಪುಣೆಇವರ ವತಿಯಿಂದ ಸುಮಾರು 10,000 ಕ್ಕೂ ಹೆಚ್ಚಿನ ಮೌಲ್ಯದಕ್ರೀಡಾ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ನಮ್ಮಕ್ಲಸ್ಟರ್ ನ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ದಯಾನಂದ್‌ರವರು ಮತ್ತುಚಂದ್ರಶೇಖರ್ ,ಹಿರಿಯೂರು ಶಿಕ್ಷಣ ಪ್ರೇಮಿಗಳು ಇವರು 3000=00 ಮೌಲ್ಯದ ಪ್ರೊಜೆಕ್ಟರ್ ಪರದೆಯನ್ನುಕೊಡುಗೆಯಾಗಿ ನೀಡಿದ್ದಾರೆ.

ನಮ್ಮ ಶಾಲೆಯ ಎಸ್.ಡಿ.ಎಂ.ಸಿ ಸದಸ್ಯರಾದ ಶ್ರೀಯುತ ಮೋಹನ್ ನಾಯ್ಕ್‌ರವರು ಮಕ್ಕಳಿಗೆ 6000 ರೂ ಮೌಲ್ಯದ ನೋಟ್ ಪುಸ್ತಕ ಮತ್ತು ಲೇಖನಿ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ.



ಹೀಗೆ ನಮ್ಮ ಶಾಲೆಯ ಮಕ್ಕಳ ಕಲಿಕೆಗೆ ಹಾಗೂ ಶಾಲೆಯ ಭೌತಿಕ ಬದಲಾವಣೆಗೆ ಹಲವಾರು ದಾನಿಗಳು ಮುಂದೆ ಬಂದಿದ್ದು ನಮ್ಮೆಲ್ಲರಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ.ದಾನಿಗಳು ನೀಡಿದಎಲ್ಲ ಪರಿಕರಗಳನ್ನು ಮಕ್ಕಳ ಗುಣಾತ್ಮಕ ಕಲಿಕೆಗೆ ಬಳಸಲಾಗುತ್ತಿದ್ದು ಅದರ ಸಾರ್ಥಕತೆಯನ್ನು ಪಡೆಯುತ್ತಿದೆ.

## 5. ಮಕ್ಕಳಲ್ಲಿ ಬುನಾದಿ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಹೆಚ್ಚಿಸಲು ಹಮ್ಮಿಕೊಂಡ ಚಟುವಟಿಕೆಗಳು:

### ನಲಿಕಲಿ ಕೊಠಡಿಯ ಪುನಃಶ್ಚೇತನ ಕಾರ್ಯಕ್ರಮ ಆಯೋಜನೆ:

## ಭೌತಿಕ ಸೌಲಭ್ಯಗಳ ಸ್ಥಿತಿಗತಿ

### 1) ವಾಲ್ ಸ್ಲೇಟ್ (ಮಕ್ಕಳ ಕಪ್ಪು ಹಲಗೆ)

ಸಿಂಗಟಗೆರೆ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೂ ಸ್ಲೇಟ್ ಮಾದರಿಯಲ್ಲಿ ವಾಲ್ ಸ್ಲೇಟ್ ಮಾಡಿಸಿ ಎಲ್ಲಾ ಮಕ್ಕಳಿಗೂ ಹೆಸರು ಬರೆದು, ಸೂಕ್ತ ಸ್ಥಳ ನಿಗದಿ ಪಡಿಸಲಾಗಿದೆ. ಉಳಿದ ಶಾಲೆಗಳಲ್ಲಿ ಸ್ಥಳ ನಿಗದಿ ಮಾಡಲಾಗಿದೆ

### 2) ಕಾರ್ಡುಗಳು (ಮೂರೂ ತರಗತಿಯ ಎಲ್ಲಾ ವಿಷಯಗಳು)

ಎಲ್ಲಾ ಶಾಲೆಗಳು ಕಾರ್ಡುಗಳನ್ನು ಜೋಡಿಸಲು ಬ್ಯಾಗಗಳನ್ನು ಬಳಸಲಾಗಿದೆ. ಕಾರ್ಡುಗಳನ್ನು ವಿಷಯವಾರು ವಿದ್ಯಾರ್ಥಿಗಳಿಗೆ ಎಟುಕುವ ರೀತಿಯಲ್ಲಿ ಜೋಡಿಸಲಾಗಿದೆ. ಪ್ರಗತಿ ನೋಟಕ್ಕೆ ಅನುಗುಣವಾಗಿ ಮಕ್ಕಳು ಕಾರ್ಡುಗಳನ್ನು ಬಳಸುತ್ತಿದ್ದಾರೆ. ಕಾರ್ಡುಗಳನ್ನು ಗುರುತಿಸಲು ಪ್ರತಿ ಮೈಲಿಗಲ್ಲುವಾರು ಚೀಟಿ ಸಂಖ್ಯೆಯನ್ನು ಅಂಟಿಸಲಾಗಿದೆ.

### 3) ಕಲಿಕಾ ಸಾಮಗ್ರಿಗಳು

ಪ್ರತಿ ಮೈಲಿಗಲ್ಲುವಾರು, ತರಗತಿವಾರು, ವಿಷಯವಾರು ಕಲಿಕಾ ಸಾಮಗ್ರಿಗಳನ್ನು ಜೋಡಿಸಲಾಗಿದೆ. ಮಕ್ಕಳು ಬಳಸಲು ಸಹಕಾರಿಯಾಗುವಂತೆ ಕಲಿಕಾ ಸಾಮಗ್ರಿಗಳನ್ನು ಕೆಂಪು , ಹಸಿರು , ನೀಲಿ ಬಣ್ಣಗಳಿಗೆ ಅನುಗುಣವಾಗಿ ವ್ಯವಸ್ಥಿತವಾಗಿ ಜೋಡಿಸಿಡಲಾಗಿದೆ. ಪ್ರಗತಿ ನೋಟದಲ್ಲಿನ ದಾಖಲೆಗೆ ಅನುಗುಣವಾಗಿ ಮಕ್ಕಳು ಕಲಿಕಾ ಸಾಮಗ್ರಿಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸುತ್ತಿದ್ದಾರೆ.

.

### 4) ಗುಂಪು ತಟ್ಟೆಗಳು

ತರಗತಿಯಲ್ಲಿ ಗುಂಪುತಟ್ಟೆಗಳನ್ನು ವ್ಯವಸ್ಥಿತವಾಗಿ ಹಾಕಲು ಸ್ಥಳ ನಿಗದಿಪಡಿಸಲಾಗಿದೆ ಶಾಲೆಗಳಲ್ಲಿಟೇಬಲ್ ಅಳವಡಿಸಲಾಗಿದೆ. ಕಲಿಕಾ ಚಟುವಟಿಕೆಗಳಿಗೆ ಇರುವ ಸ್ಥಳಾವಕಾಶವನ್ನು ಸೂಕ್ತವಾಗಿ ಬಳಸಿಕೊಳ್ಳುತ್ತಿದೇವೆ.

## 5) ಪ್ರಗತಿ ನೋಟ

ಪ್ರಗತಿ ನೋಟವನ್ನು ಮಕ್ಕಳ ಕೈಗೆಟಕುವಂತೆ ಪ್ರಗತಿ ನೋಟಗಳನ್ನು ಪ್ರದರ್ಶಿಸಲಾಗಿದ್ದು, ಹಿಂದಿನ ಮೆಟ್ಟಿಲವರೆಗೂ ಗುರುತಿಸಲಾಗಿದೆ. ಪ್ರಗತಿ ನೋಟವನ್ನು ಮಕ್ಕಳೇ ಸ್ವತಃ ಗುರುತಿಸುತ್ತಿದ್ದಾರೆ. ವಿಷಯವಾರು ವಿದ್ಯಾರ್ಥಿಗಳಿಗೆ ಎಟುಕುವ ರೀತಿಯಲ್ಲಿ ಜೋಡಿಸಲಾಗಿದೆ. ಪ್ರಗತಿ ನೋಟಕ್ಕೆ ಅನುಗುಣವಾಗಿ ಮಕ್ಕಳು ಕಾರ್ಡುಗಳನ್ನು ಬಳಸುತ್ತಿದ್ದಾರೆ.

## 6) ಹವಾಮಾನ ನಕ್ಷೆ

ಸಾಮೂಹಿಕ ಹಾಗೂ ಅಭ್ಯಾಸ ಪುಸ್ತಕದಲ್ಲಿನ ಹವಾಮಾನ ನಕ್ಷೆಯನ್ನು ಹಿಂದಿನ ಅವಧಿಯವರೆಗೆ ಗುರುತಿಸಲಾಗಿದೆ. ಹವಾಮಾನ ನಕ್ಷೆಯನ್ನು ನಿರ್ವಹಿಸಲಾಗಿದ್ದು, ತಿಂಗಳಿಗೊಮ್ಮೆ ಕ್ರೋಢೀಕರಿಸಿ, ವಿಶ್ಲೇಷಿಸಲಾಗಿದೆ.

## 7) ಕಲಿಕಾ ಚಪ್ಪರ

ಕಲಿಕಾ ಚಪ್ಪರವು ವಿದ್ಯಾರ್ಥಿಗಳು ಸಿದ್ಧ ಪಡಿಸಿದ ವಸ್ತುಗಳಿಂದ ಪ್ರದರ್ಶನಗೊಂಡಿದೆ. ಪ್ರಗತಿ ನೋಟಕ್ಕೆ ಅನುಗುಣವಾಗಿ ಮುಕ್ತಾಯಗೊಂಡಿರುವ ಕ್ರಾಫ್ಟ್ ಚಟುವಟಿಕಗಳು ಕಲಿಕಾ ಚಪ್ಪರದಲ್ಲಿ ಪ್ರದರ್ಶನ ಮಾಡಲಾಗಿದೆ.

## 8) ಅಭ್ಯಾಸ ಪುಸ್ತಕಗಳು

ಅಭ್ಯಾಸ ಪುಸ್ತಕಗಳನ್ನು ರ್‍ಯಾಕ್ ನಲ್ಲಿಜೋಡಿಸಲು ಸ್ಥಳಾವಕಾಶ ನೀಡಲಾಗಿದೆ. ಪ್ರಗತಿ ನೋಟದಲ್ಲಿನ ದಾಖಲೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಪೂರ್ಣಗೊಳಿಸಿರುತ್ತಾರೆ. ಅಭ್ಯಾಸ ಪುಸ್ತಕಗಳನ್ನು ತಿದ್ದಿ, ದಿನಾಂಕ ನಮೂದಿಸಿ, ಸಹಿ ಮಾಡಿರುತ್ತೇವೆ.

## 9) ಎಲ್ಲಾ ಮಕ್ಕಳಿಗೂ ಸೂಕ್ತ ಸ್ಥಳಾವಕಾಶ

ತರಗತಿಯೊಳಗೆ ಗುಂಪುಗಳ ನಿರ್ವಹಣೆಗೆ ಸ್ಥಳವವನ್ನು ನಿಗದಿಗೊಳಿಸಿರುತ್ತಾರೆ. ಪ್ರಗತಿನೋಟದ ದಾಖಲೆಗೆ ಅನುಗುಣವಾಗಿ ಮಕ್ಕಳು ತಮ್ಮ ತಮ್ಮ ಗುಂಪುಗಳಲ್ಲಿ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದಾರೆ.

## 10) ಶಿಕ್ಷಕರ ದಿನಚರಿ

ದಿನಚರಿಯಲ್ಲಿ ಪ್ರತಿದಿನ ನಿರ್ವಹಿಸಿದ ಚಟುವಟಿಕೆಗಳ ಸಂಖ್ಯೆಯನ್ನು ಭರ್ತಿ ಮಾಡುತ್ತಿದ್ದಾರೆ. ದಿನಚರಿಯ ಮಾಹಿತಿಗೂ ಪ್ರಗತಿ ನೋಟದ ದಾಖಲೆಗೂ ತಾಳೆಯಾಗುತ್ತಿದೆ.





ಕೃಷಿ ಪತ್ತಿನ ಸಹಕಾರ ಸಂಘ, ನಿಟ್ಟೂರು ವತಿಯಿಂದ 8000 ಮೌಲ್ಯದ ನಲಿಕಲಿ ಟೇಬಲ್ ಮತ್ತು ಖುರ್ಚಿಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ.





ಸ್ಥಾಪನೆ : 1941
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಗಟಗೆರೆ.
ನಿಟ್ಟೂರು ಕ್ಲಸ್ಟರ್, ಹಾಸನ ತಾಲ್ಲೂಕು.
ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ

## 6. ಶಾಲೆಯ ಭೌತಿಕ ಪರಿಸರ ಶಾಲಾ ಮೈದಾನ, ಕುಡಿಯುವ, ನೀರು, ಶೌಚಾಲಯಗಳ ಮಾಹಿತಿ:





## 7. ಮಕ್ಕಳ ಕಲಿಕೆಯ ಪ್ರಗತಿಗೆ ನಾವಿನ್ಯಯುತ ಚಟುವಟಿಕೆಗಳು:

ಮಕ್ಕಳಲ್ಲಿ ವೈಜ್ಞಾನಿಕ ಪ್ರಜ್ಞೆ ಮತ್ತು ಮನೋಭಾವ ಮೂಡಿಸಲು ಶಿಕ್ಷಕರ ಮಾರ್ಗದರ್ಶನದಲ್ಲಿ ವಿಜ್ಞಾನ ಮಾದರಿಗಳನ್ನು ತಯಾರಿಸುವ ಚಟುಚಟಿಕೆಗಳನ್ನು ಮಾಡಿಸಲಾಗುತ್ತಿದೆ.



ಉಪಗ್ರಹದ ಮಾದರಿಯೊಂದಿಗೆ ಮಕ್ಕಳು

ಉಪಗ್ರಹದ ಚಲನೆಯ ವಿಡಿಯೋ ವೀಕ್ಷಿಸಲು ಈ ಕ್ಯೂಆರ್‌ಕೋಡ್‌ಅನ್ನು ಸ್ಕ್ಯಾನ್ ಮಾಡಿ.

ಮಕ್ಕಳಿಗೆ ವಾರಕ್ಕೊಂದು ಬಾರಿ ರಸಪ್ರಶ್ನೆ ಕಾರ್ಯಕ್ರಮವನ್ನು ಕನ್ನಡದ ಕೋಟ್ಯಾಧಿಪತಿ ಮಾದರಿಯಲ್ಲಿ **ಶತಾಧಿಪತಿ** ಎಂಬ ನೂತನ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ.

ಶತಾಧಿಪತಿ ಮಾದರಿರಸಪ್ರಶ್ನೆಕಾರ್ಯಕ್ರಮದಟ್ರಯಲ್ ವಿಡಿಯೋ ವೀಕ್ಷಿಸಲು ಈ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿರಿ.

ಮಕ್ಕಳಿಗೆ ಆಹಾರದ ಪ್ರಾಮುಖ್ಯತೆ ತಿಳಿಸುವ ಪೋಷಣ್‌ಅಭಿಯಾನಕಾರ್ಯಕ್ರಮವನ್ನುಅತ್ಯಂತ ಯಶಸ್ವಿಯಾಗಿ ಆಚರಿಸಿ ಮಕ್ಕಳಿಗೆ ಆಹಾರದಲ್ಲಿನ ಪೋಷಕಾಂಶಗಳ ಬಗ್ಗೆ ಮಾಹಿತಿಯನ್ನು ತಿಳಿಸಲಾಯಿತು.



## 8. ವಿಶೇಷ ಚಟುವಟಿಕೆಗಳು/ ಕಾರ್ಯಕ್ರಮಗಳು:

ಪೋಷಣ್ ಅಭಿಯಾನ ಕಾರ್ಯಕ್ರಮದ ಸಂಪೂರ್ಣ ವಿಡಿಯೋಗೆ ಈ ಮೇಲಿನ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ






ಕ್ಲಸ್ಟರ್ ಹಂತದ ಪ್ರತಿಭಾಕಾರಂಜಿಕಾರ್ಯಕ್ರಮದಲ್ಲಿಛದ್ಮವೇಷಕ್ಕೆ ಪ್ರಥಮ ಸ್ಥಾನ ಪಡೆದಕ್ಷಣ ಮಕ್ಕಳಲ್ಲಿ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತರುವ ಪ್ರಯತ್ನ ಮಾಡಲಾಗುತ್ತಿದೆ.



ಸ್ವಚ್ಛತಾ ಪಖ್ವಾಡಾ ಎಂಬ ಕಾರ್ಯಕ್ರಮದಲ್ಲಿ ಮಕ್ಕಳಿಗೆ ವಿವಿಧರೀತಿಯ ಚಟುವಟಿಕೆಗಳನ್ನು ಆಯೋಜಿಸಿ ಅತ್ಯುತ್ತಮವಾಗಿಚಟುವಟಿಕೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಿಸಲಾಯಿತು.






**ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಕ್ಕಳಿಗೆ ವೇಷಭೂಷಣದ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು ಈ ಮೂಲಕ ನಮ್ಮ ನೆಲದ ಸಂಸ್ಕೃತಿ ಬಗೆಗಿನ ಗೌರವ ಮೌಲ್ಯ ವನ್ನು ತಿಳಿಸಲಾಯಿತು.**




ಮಕ್ಕಳಿಗೆ ಪರಿಸರ ಕಾಳಜಿ ಕುರಿತಾಗಿ ಪ್ಲಾಸ್ಟಿಕ್ ಎಂಬ ವಿಷವನ್ನು ಹೇಗೆ ವಿಲೇವಾರಿ ಮಾಡಬಹುದುಎಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ಮಾಡಿತೋರಿಸಲಾಯಿತು.ಮತ್ತು ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸಲಾಗುತ್ತಿದೆ.




ಹೀಗೆ ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಶಾಲೆಗಳಲ್ಲಿ ಅನುಷ್ಠಾನ ಮಾಡುತ್ತಿದ್ದು ಮಕ್ಕಳ ಕಲಿಕೆಯಲ್ಲಿ ಸಕರಾತ್ಮಕ ಪರಿಣಾಮಉಂಟುಮಾಡುತ್ತಿದ್ದುಇದನ್ನು ಮುಂದುವರೆಸಿಕೊಂಡು ಹೋಗಲು ಇಚ್ಛಿಸುತ್ತೇವೆ.

**ನಲಿಕಲಿ ತರಗತಿ ಪುನಃಶ್ಚೇತನದ ಸಂಪೂರ್ಣ ವಿಡಿಯೋಗಾಗಿ ಸ್ಕ್ಯಾನ್ ಮಾಡಿ**

ನಮ್ಮ ಶಾಲೆಯನ್ನು ಪೋಷಕರ ಹಿರಿಯ ವಿದ್ಯಾರ್ಥಿಗಳ ಸಹಕಾರ ಪಡೆದು ಶಾಲೆಯ ಭೌತಿಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸದಾ ಶ್ರಮಿಸುತ್ತಾ ಇರುವ ಪಣತೊಟ್ಟು ಕೇವಲ ಒಂದು ವರ್ಷದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಹಕರಿಸಿದ ಸರ್ವರಿಗೂ ಶಾಲೆಯ ಪರವಾಗಿ ಇಲಾಖಾ ಪರವಾಗಿ ತುಂಬು ಹೃದಯದ ಧನ್ಯವಾದಗಳು.